ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **36/2019**

| | | |
|---|---|---|
| ಸಾಕ್ಷಿಯ ಹೆಸರುಃ | ಸಾಬಪ್ಪ | ಪ್ರಾಸಾಃ 2 |
| ಗಂಡನ/ತಂದೆಯ ಹೆಸರುಃ | ದೊಡ್ಡಪ್ಪ | ಚಾಸಾಃ 4 |
| ವಯಸ್ಸುಃ | 30 ವರ್ಷ | ದಿಃ 07-02-2026 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಗುಡ್ಲಗುಂಟಾ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 1 ನನ್ನ ಅಣ್ಣ. ಆರೋಪಿ ನನ್ನ ಅಣ್ಣ-ತಮ್ಮಂದಿರು ಆಗಬೇಕು. ದಿನಾಂಕಃ 25-09-2018 ರಂದು ನಾನು ಮದ್ಯಾಹ್ನ 3.00 ಗಂಟೆಗೆ ನಾನು ನನ್ನ ಜಮಿನಿನ ಹತ್ತಿರ ಇರುವಾಗ ಆರೋಪಿ ಈತನು ತನ್ನ ಎತ್ತುಗಳನ್ನು ಚಾಸಾಃ 1 ರವರ ಜಮಿನಿನಲ್ಲಿ ಮೇಯಿಸುತ್ತಿರುವಾಗ, ಚಾಸಾಃ 1 ರವರು ಎತ್ತುಗಳು ಬೆಳೆ ಹಾಳು ಮಾಡುತ್ತವೆ ಆದ್ದರಿಂದ ಎತ್ತುಗಳನ್ನು ತೆಗೆದುಕೊಂಡು ಹೋಗು ಎಂದು ಹೇಳಿರುತ್ತಾನೆ. ಆಗ ಆರೊಪಿತನು ಚಾಸಾಃ 1 ರವರಿಗೆ ಸೂಳೆ ಮಗನೇ ನಿನಗೆ ಸೊಕ್ಕು ಬಹಳ ಆಗಿರುತ್ತದೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕುಂಟಿ ಬೆಲೆ ತೆಗೆದುಕೊಂಡು ಚಾಸಾಃ 1 ರವರ ತಲೆಗೆ ಹೊಡೆದು ಗಾಯ ಮಾಡಿರುತ್ತಾನೆ. ಕೈಯಿಂದ ಚಾಸಾಃ 1 ರವರ ಬೆನ್ನಿಗೆ ಮತ್ತು ತುಟಿಗೆ ಗುದ್ದಿರುತ್ತಾನೆ. ಸದರಿ ಜಗಳವಾಡುವಾಗ ನಾನು ಜಗಳವನ್ನು ಬಿಡಿಸಿರುತ್ತೇನೆ. ಸದರಿ ನಾವು ಸೈದಪೂರ ಪೊಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ಸಾಕ್ಷಿಯು ಮು. ಮಾ. 1 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ.

ಪಾಟಿ ಸವಾಲು ಃಆರೋಪಿ ಪರ ಶ್ರೀ ಎಚ್. ಎಮ್. ಪಿ. ವಕೀಲರಿಂದಃ

1. ಚಾಸಾಃ 2 ಮತ್ತು 3 ರವರು ಅಣ್ಣ-ತಮ್ಮಂದಿರು ಎಂದರೆ ಸಾಕ್ಷಿಯು ಚಾಸಾಃ 2 ರವರು ಸಂಬಂಧಿಕರು, ಚಾಸಾಃ 3 ರವರು ಸಂಬಂಧಿಕರು ಇರುವುದಿಲ್ಲ. ಆರೋಪಿ, ಚಾಸಾಃ 1, ನಾನು ಸಂಬಂಧಿಕರು ಎಂದರೆ ಸರಿ. ಸದರಿ ಮೊದಲು ಆರೋಪಿತನ ಜಮೀನು ಬರುತ್ತದೆ ಆದ ನಂತರ ನಮ್ಮ ಜಮೀನು ಬರುತ್ತದೆ ಎಂದರೆ ಸರಿ. ಸದರಿ ನಮ್ಮ ಜಮಿನಿನಿಂದ ನೀರು ಆರೋಪಿತನ ಜಮಿನಿಗೆ ಹೋಗುತ್ತದೆ ಎಂದರೆ ಸರಿ. ಸದರಿ ನೀರನ್ನು ಬಳಸಿದ ನಂತರ ಜಮಿನಿನಲ್ಲಿ ಕಟ್ಟಬೇಕು ಎಂದರೆ ಸರಿ.

ಸದರಿ ಆರೋಪಿತನು ಕೂಡ ತನ್ನ ಜಮಿನಿನಲ್ಲಿ ಬೆಳೆ ಮಾಡುತ್ತಾ ಇದ್ದನು ಎಂದರೆ ಸರಿ. ಸದರಿ ನಾವು ನೀರನ್ನು ಬಿಟ್ಟು ಆರೋಪಿತನ ಜಮಿನಿನಲ್ಲಿರುವ ಬೆಳೆಯನ್ನು ನಾಶ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಒಬ್ಬರ ಜಮಿನಿನಿಂದ ಬೇರೆ ಜಮಿನಿಗೆ ನೀರು ಹೋಗಬೇಕು ಎಂದರೆ ಸರಿ. ಸದರಿ ನೀರನ್ನು ಬಳಸಿಕೊಂಡು ಆರೋಪಿತನ ಜಮಿನಿನಲ್ಲಿ ರಾತ್ರಿ ನೀರನ್ನು ಬಿಟ್ಟು ಬೆಳೆಗಳನ್ನು ನಾಶ ಮಾಡಿರುತ್ತೇವೆ ಎಂದರೆ ಸರಿಯಲ್ಲ.

2. ನಾನು, ಚಾಸಾಃ 1, 3, ಶೇಖಪ್ಪ ತಂದೆ ಚಂದ್ರಾಮಪ್ಪ, ದೇವಿಂದ್ರ ತಂದೆ ನಾಗಪ್ಪ ಪೊಲಿಸ ಠಾಣೆಗೆ ದೂರು ನೀಡಲು ಹೋಗಿರುತ್ತೇವೆ. ಸದರಿ ದೂರು ನೀಡಿದ ದಿನ ನಮಗೆ ವಿಚಾರಣೆ ಮಾಡಿರುವುದಿಲ್ಲ. ಸದರಿ ಮು. ಮಾ. ಗಳೆ ಹೊಡೆಯುವ ಕಡೆಯ ಹತ್ತಿರ ಇರುತ್ತದೆ ಎಂದರೆ ಸರಿ. ಸದರಿ ಮು. ಮಾ. ನಮಗೆ ಸೇರಿರುತ್ತದೆ. ಸದರಿ ಎತ್ತುಗಳಿಂದ ಬೆಳೆ ಹಾಳಾದ ನಂತರ ಚಾಸಾಃ 1 ರವರು ಕೇಳಿದ ನಂತರ ಆರೋಪಿತನು ಹೊಡೆ-ಬಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಆ ದಿನ ಯಾವುದೇ ಬೆಳೆ ಹಾನಿಯಾಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮು. ಮಾ. ದಿಂದ ಹೊಡೆದು ಗಾಯವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ